**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಡಿಸಿಇ:ಟಿಆರ್ಎನ್:01:2022:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:26.12.2022

# ಸುತ್ತೋಲೆ

ವಿಷಯ: 2022ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆ ಸಂಬಂಧ ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ:ಇಡಿ:295:ಡಿಸಿಇ:2022 (ಇ) ದಿನಾಂಕ.24.11.2022.
2. ಈ ಕಛೇರಿಯ ಸಮ ಸಂಖ್ಯೆಯ ಅಧಿಸೂಚನೆ ದಿ: 05.12.2022.
3. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:14.12.2022 ಮತ್ತು ದಿನಾಂಕ:20.12.2022ರಂತೆ ಪ್ರಕಟಿಸಲಾದ ತಾತ್ಕಾಲಿಕ ಆದ್ಯತಾ ಪಟ್ಟಿ.

*****

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ಸಹಾಯಕ ಪಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರು) ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಅಧಿಸೂಚಿಸಲಾಗಿರುತ್ತದೆ.

ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ನೀಡಿದ ಅನುಮತಿಯಂತೆ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳಲ್ಲಿನ ಅವಕಾಶಗಳನ್ವಯ ಉಲ್ಲೇಖ (2)ರಂತೆ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಅರ್ಜಿಗಳನ್ನು ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಬಯಸುವ ಬೋಧಕರಿಂದ ಮನವಿಗಳನ್ನು ಆನ್ ಲೈನ್ ಮೂಲಕ ಸಲ್ಲಿಸಲು ಸೂಚಿಸಲಾಗಿತ್ತು. ನಿಗದಿತ ಕೊನೆಯ ದಿನಾಂಕದೊಳಗೆ ಸ್ವೀಕೃತವಾದ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಅರ್ಜಿ ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಕೋರಲಾದ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಒಳಪಡುವ ಬೋಧಕರ ವಲಯವಾರು ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಉಲ್ಲೇಖ (3) ರಂತೆ ಪ್ರಕಟಿಸಿ ಆನ್‌ಲೈನ್ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

ನಿಗದಿತ ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡುವ ಬೋಧಕರ

ಅಂತಿಮ ಆದ್ಯತಾ ಪಟ್ಟಿ ಹಾಗೂ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಿರುವ ಬೋಧಕರ ಅಂತಿಮ ಆದ್ಯತಾ ಪಟ್ಟಿಗಳನ್ನು ಈ ಸುತ್ತೋಲೆಗೆ ಕೆಳಕಂಡಂತೆ ಅನುಬಂಧಿಸಲಾಗಿದೆ.

| | |
|---|---|
| ಅನುಬಂಧ 1a : | ಉಳಿಕೆ ಮೂಲವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಆದ್ಯತಾ ಪಟ್ಟಿ. |
| ಅನುಬಂಧ 1b : | ಉಳಿಕೆ ಮೂಲವೃಂದದ ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರ ಆದ್ಯತಾ ಪಟ್ಟಿ. |
| ಅನುಬಂಧ 1c : | ಉಳಿಕೆ ಮೂಲವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಕಾಯ್ದಿರಿಸಿದ ಬೋಧಕರ ಆದ್ಯತಾ ಪಟ್ಟಿ |
| ಅನುಬಂಧ 2a : | ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಆದ್ಯತಾ ಪಟ್ಟಿ |
| ಅನುಬಂದ 2b : | ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರ ಆದ್ಯತಾ ಪಟ್ಟಿ. |
| ಅನುಬಂಧ 2c : | ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಕಾಯ್ದಿರಿಸಿದ ಬೋಧಕರ ಆದ್ಯತಾ ಪಟ್ಟಿ. |
| ಅನುಬಂಧ 3a : | ವಿಶೇಷ ಪ್ರಕರಣಗಳ ವರ್ಗಾವಣೆ ಕೌನ್ಸಿಲಿಂಗ್‌ನ ಆದ್ಯತಾ ಪಟ್ಟಿ |
| ಅನುಬಂದ 3b : | ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರ ಕೌನ್ಸಿಲಿಂಗ್‌ನ ಆದ್ಯತಾಪಟ್ಟಿ |
| ಅನುಬಂಧ 3c : | ವಿಶೇಷ ಪ್ರಕರಣಗಳ ವರ್ಗಾವಣೆಯ ಕಾಯ್ದಿರಿಸಿದ ಬೋಧಕರ ಆದ್ಯತಾ ಪಟ್ಟಿ. |
| ಅನುಬಂಧ 4 | ಕೌನ್ಸಿಲಿಂಗ್‌ನಲ್ಲಿ ಆಯ್ಕೆಗೆ ಲಭ್ಯಗೊಳಿಸುವ ಖಾಲಿಹುದ್ದೆಗಳ ವಿವರ |
| ಅನುಬಂಧ 5 | Online Counselling ವೇಳಾಪಟ್ಟಿ |

ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ದಿನಾಂಕ:27.12.2022ರಿಂದ ಆನ್‌ಲೈನ್ ಮೂಲಕ ನಡೆಸಲು ಉದ್ದೇಶಿಸಿದ್ದು ವಿವರವಾದ ವೇಳಾಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನ ಬೋಧಕರ ವರ್ಗಾವಣೆ – 2022 (December) Web page ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದವರು ಇಲಾಖಾ ವೆಬ್‌ಸೈಟ್ ಅನ್ನು ಗಮನಿಸುವುದು. Online Transfer Counselling ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಪರಿಗಣನೆಯಲ್ಲಿಟ್ಟುಕೊಂಡು ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಳ್ಳುವಂತೆ ಸೂಚಿಸಲಾಗಿದೆ.

1. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಲಯವಾರು ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.75 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.25 ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಬೇಕಿರುತ್ತದೆ.

2. ರಾಜಧಾನಿ ಬೆಂಗಳೂರಿನಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಹಾಗೂ ಶೇ.92 ರಷ್ಟು ಹುದ್ದೆಗಳನ್ನು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಿರಿಸಬೇಕಿರುತ್ತದೆ.
3. ಕಲ್ಯಾಣ ಕರ್ನಾಟಕ ಮತ್ತು ಬೆಂಗಳೂರು ನಗರವನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿರುವ ಮಂಜೂರಾದ ವಿಷಯವಾರು ಹುದ್ದೆಗಳಲ್ಲಿ ಶೇ.100 ರಷ್ಟು ಹುದ್ದೆಗಳು ಉಳಿಕೆ ರಾಜ್ಯ ವೃಂದಕ್ಕೆ ಮೀಸಲಾಗಿರುತ್ತದೆ.
4. ಕೌನ್ಸಿಲಿಂಗ್ ಸಂದರ್ಭದಲ್ಲಿ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸುವ ಸಮಯದಲ್ಲಿ ಈಗಾಗಲೇ ಕರ್ತವ್ಯನಿರ್ವಹಿಸುತ್ತಿರುವ ಸಂಖ್ಯೆಯಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ರಾಜ್ಯ ವೃಂದಕ್ಕೆ ಸೇರಿದ ಸಂಖ್ಯೆಯನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಮೇಲೆ ಕ್ರಮ ಸಂ. 1, 2 ಮತ್ತು 3 ರಲ್ಲಿ ತಿಳಿಸಿರುವ ಅನುಪಾತದಲ್ಲಿ ಪ್ರದರ್ಶಿಸಲಾಗುವುದು.
5. ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಹಾಗೂ ಉಳಿಕೆ ರಾಜ್ಯ ವೃಂದದಲ್ಲಿನ ಬೋಧಕರನ್ನು ಜೇಷ್ಠತೆಯನ್ವಯ ಒಟ್ಟುಗೂಡಿಸಿ ಒಂದೇ ಆದ್ಯತಾ ಪಟ್ಟಿಯನ್ನು (Combined Seniority list) ಅನ್ನು ತಯಾರಿಸಿ ಅದರಂತೆ ಕೌನ್ಸಿಲಿಂಗ್‌ನಲ್ಲಿ ಅವಕಾಶ ನೀಡಲಾಗುವುದು ಹಾಗೂ ಮೇಲೆ ಕ್ರ.ಸಂ 01 ರಿಂದ 04 ರಲ್ಲಿ ತಿಳಿಸಿರುವಂತೆ ವಿಷಯವಾರು ಖಾಲಿ ಹುದ್ದೆಗಳನ್ನು ಪ್ರದರ್ಶಿಸಲಾಗುವುದು.
6. ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿರುವ ಬೋಧಕರು ಪ್ರಸ್ತುತ ತಾವು ಲೀನ್ ಹೊಂದಿರುವ ಕಾಲೇಜಿನ ಊರು/ಪಟ್ಟಣ/ನಗರವನ್ನು ಹೊರತುಪಡಿಸಿ ಇತರೆಡೆಗಳ Vacancy ಪಟ್ಟಿಯಲ್ಲಿನ ಕಾಲೇಜುಗಳಲ್ಲಿ ಲಭ್ಯವಾಗುವ ಖಾಲಿಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

   **<u>ಉದಾ:</u>** *ಮಮವಿಕಾ ಮೈಸೂರು ಇಲ್ಲಿನ ಬೋಧಕರು ಮೈಸೂರು ನಗರದ ಇತರ ಕಾಲೇಜುಗಳನ್ನು ಹೊರತುಪಡಿಸಿ* Vacancy *ಪಟ್ಟಿಯಲ್ಲಿನ ಇತರ ಯಾವುದೇ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.*
7. ಕೌನ್ಸಿಲಿಂಗ್ ಸಮಯದಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಕಾಲೇಜಿನಲ್ಲಿಯೇ ಮುಂದುವರೆಸಲಾಗುವುದು.
8. ಪತಿ-ಪತ್ನಿ ಪ್ರಕರಣದಲ್ಲಿ ಕ್ರ.ಸಂ. 06 ರಲ್ಲಿನ ಅಂಶಗಳಿಗೊಳಪಟ್ಟು ಪತಿ/ಪತ್ನಿ ಎಲ್ಲಿ ಕರ್ತವ್ಯನಿರ್ವಹಿಸುತ್ತಿದ್ದಾರೋ ಅದೇ ಜಿಲ್ಲೆಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಒಂದು ವೇಳೆ ಪತಿ/ಪತ್ನಿ ಕರ್ತವ್ಯನಿರ್ವಹಿಸುತ್ತಿರುವ

ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಮಾತ್ರ ಸಮೀಪದ ಖಾಲಿ ಹುದ್ದೆ ಲಭ್ಯವಿರುವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

9. ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಾಗಿರುವ ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಸುಳ್ಳು/ತಪ್ಪಾದ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಬೋಧಕರ ವಿರುದ್ಧ ನಿಯಮಾನುಸಾರ ಇಲಾಖಾ ಶಿಸ್ತು ಕ್ರಮ ಜರುಗಿಸಲಾಗುವುದು.
10. ವಿಶೇಷ ಪ್ರಕರಣಗಳಡಿ ವರ್ಗಾವಣೆಗೆ ಅರ್ಹರಾಗಿರುವ ಬೋಧಕರು ಹಾಗೂ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಪಡೆದಿರುವ ಬೋಧಕರು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರಿಗೆ ಕಡ್ಡಾಯವಾಗಿ ಸಲ್ಲಿಸುವುದು.
11. ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ವಿಷಯವಾರು ಹುದ್ದೆಗಳಲ್ಲಿ ಪ್ರಾಯೋಗಿಕವಲ್ಲದ ವಿಷಯಗಳಿಗೆ ಕನಿಷ್ಟ 16 ಗಂಟೆಗಳಿಗಿಂತ ಹೆಚ್ಚು ಕಾರ್ಯಭಾರವಿರುವ ಹಾಗೂ ಪ್ರಾಯೋಗಿಕ ವಿಷಯಗಳಲ್ಲಿ ಕನಿಷ್ಟ 20 ಗಂಟೆಗಳಿಗಿಂತ ಹೆಚ್ಚು ಕಾರ್ಯಭಾರವಿರುವ ಹುದ್ದೆಗಳನ್ನು ಮಾತ್ರ ಕೌನ್ಸಿಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದು. ಶೈಕ್ಷಣಿಕವಾಗಿ ಅಗತ್ಯವಿರುವ ಖಾಲಿ ಹುದ್ದೆಗಳೊಂದಿಗೆ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಅರ್ಹರಾಗಿರುವ ಬೋಧಕರ ಹುದ್ದೆಗಳನ್ನು ಖಾಲಿ ಹುದ್ದೆಯೆಂದು ಪರಿಗಣಿಸಲಾಗುವುದು.
12. ವರ್ಗಾವಣೆ ನಿಯಮಗಳನ್ವಯ ಬಿ-ವಲಯ(B-Zone)ದಿಂದ ಕೌನ್ಸಿಲಿಂಗ್ ಅನ್ನು ಪ್ರಾರಂಭಿಸಲಾಗುವುದು. ವಿಶೇಷ ಪ್ರಕರಣಗಳಿಗೆ ಪ್ರತಿ ವಲಯದಲ್ಲಿಯೂ ಎರಡು ಹಂತಗಳಲ್ಲಿ ಕೌನ್ಸಿಲಿಂಗ್ (two rounds of counselling) ಅನ್ನು ನಡೆಸಿ ನಂತರ ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರಿಗೆ ಕೌನ್ಸಿಲಿಂಗ್ ನಡೆಸಲಾಗುವುದು.
13. ವರ್ಗಾವಣೆ ಆದ್ಯತಾ ಪಟ್ಟಿಯಲ್ಲಿನ ಬೋಧಕರುಗಳೊಂದಿಗೆ Online Counselling ಸಂಬಂಧದ Video Conference Link ಅನ್ನು Share ಮಾಡಲಾಗುವುದು ಹಾಗೂ ಇಲಾಖೆಯ Website ನಲ್ಲಿಯೂ ಸಹ ಪ್ರಕಟಿಸಲಾಗುವುದು.
14. ಈ ಅಧಿಸೂಚನೆಗೆ ಲಗತ್ತಿಸಿರುವ ಅಂತಿಮ ಆದ್ಯತಾ ಪಟ್ಟಿಯ ಜೇಷ್ಟತೆಯನ್ವಯ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು ಸಂಬಂಧಿಸಿದ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

15. ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಆದ್ಯತಾಪಟ್ಟಿಯಲ್ಲಿನ ಬೋಧಕರು ವರ್ಗಾವಣಾ ವೇಳಾಪಟ್ಟಿಯಂತೆ Video Conference ಮೂಲಕ ಭಾಗವಹಿಸುವುದು.
16. ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಗೆ ಒಳಪಡುವ ಬೋಧಕರು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿದ್ದು, ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿ ಪರಿಗಣಿಸಲಾಗುವುದು.
17. ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿನ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು. ಬೋಧಕರು ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯ ಕೌನ್ಸಿಲಿಂಗ್ ಪ್ರಕ್ರಿಯೆಯ ನಂತರ ಲಭ್ಯವಿರುವ ಖಾಲಿ ಹುದ್ದೆಗೆ ಇಲಾಖೆಯಿಂದ ವರ್ಗಾವಣೆ ಮಾಡಲಾಗುವುದು.
18. ವಿಶೇಷ ಪ್ರಕರಣಗಳಡಿ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿ ಆಧ್ಯತಾ ಪಟ್ಟಿಯಲ್ಲಿರುವ ಬೋಧಕರಿಗೆ ಎರಡು ರೌಂಡ್‌ಗಳ ಕೌನ್ಸಿಲಿಂಗ್ ಅವಕಾಶ ಕಲ್ಪಿಸಲಾಗುವುದು.
19. ಮೊದಲನೆಯ ರೌಂಡ್ ಕೌನ್ಸಿಲಿಂಗ್‌ಗೆ ಗೈರುಹಾಜರಾದ ವಿಶೇಷ ಪ್ರಕರಣಗಳ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
20. ಮೊದಲನೆಯ ರೌಂಡ್‌ನಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳದ ವಿಶೇಷ ಪ್ರಕರಣಗಳ ಬೋಧಕರಿಗೆ ಎರಡನೇ ರೌಂಡ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು.
21. ಎರಡನೇ ರೌಂಡ್‌ನಲ್ಲಿಯೂ ಸ್ಥಳ ಆಯ್ಕೆ ಮಾಡಿಕೊಳ್ಳದ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

22. ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಮಹಾರಾಣಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮತ್ತು ಶ್ರೀಮತಿ ವಿಹೆಚ್‌ಡಿ ಗೃಹವಿಜ್ಞಾನ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯವಾಗಿ ಉನ್ನತೀಕರಿಸಲಾಗಿರುವ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜು ಮತ್ತು ಏಕೀಕೃತ ವಿಶ್ವವಿದ್ಯಾಲಯವಾಗಿರುವ ಸರ್ಕಾರಿ ಕಾಲೇಜು ಮಂಡ್ಯ ಇಲ್ಲಿನ ಖಾಲಿ ಹುದ್ದೆಗಳನ್ನು ಮತ್ತು ಕಡ್ಡಾಯ ವರ್ಗಾವಣೆಯಿಂದ ಉದ್ಭವವಾಗುವ ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಪರಿಗಣಿಸಲಾಗುವುದಿಲ್ಲ.
23. ಕೌನ್ಸಿಲಿಂಗ್ ಪ್ರಕ್ರಿಯೆಯನ್ನು WEBEX Platform ಬಳಸಿ ಆನ್‌ಲೈನ್ ಮೂಲಕ ನಡೆಸಲಾಗುವುದು. ವರ್ಗಾವಣೆ ಆದ್ಯತಾ ಪಟ್ಟಿಯಲ್ಲಿರುವ ಬೋಧಕರು WEBEX APP ಅನ್ನು Google Play store ಮೂಲಕ download ಮಾಡಿಕೊಳ್ಳಬೇಕಿರುತ್ತದೆ.
24. ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವ ಸಮಯದಲ್ಲಿ ಉತ್ತಮ Internet Connectivity ಲಭ್ಯವಿರುವುದನ್ನು ಖಚಿತಪಡಿಸಿಕೊಂಡು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವುದು ಸಂಬಂಧಿಸಿದ ಬೋಧಕರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಕಾರಣದಿಂದ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ವಿಫಲರಾದಲ್ಲಿ, ಗೈರುಹಾಜರಿಯೆಂದು ಪರಿಗಣಿಸಲಾಗುವುದು.
25. ನಿಗದಿ ಪಡಿಸಿದ Time Schedule ನಲ್ಲಿಯೇ ನಿಗದಿಪಡಿಸಿದ ಬೋಧಕರು ಮಾತ್ರವೇ Login ಆಗಿ video on ಮಾಡಿಕೊಂಡು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸತಕ್ಕದ್ದು ಹಾಗೂ ಸ್ಥಳ ಆಯ್ಕೆ ಮಾಡಿಕೊಂಡ ಕೂಡಲೇ Logout ಆಗುವುದು.
26. ಕೌನ್ಸಿಲಿಂಗ್ ಸಮಯದಲ್ಲಿ Login ಆದ ನಂತರ ಸ್ಥಳ ಆಯ್ಕೆ ವಿಷಯವನ್ನು ಹೊರತುಪಡಿಸಿ ಇತರೆ ವಿಷಯಗಳ ಕುರಿತು ಚರ್ಚೆಗೆ ಅವಕಾಶವಿರುವುದಿಲ್ಲ. ಈ ವಿಷಯದ ಉಲ್ಲಂಘನೆಯನ್ನು ದುರ್ನಡತೆಯೆಂದು ಪರಿಗಣಿಸಲಾಗುವುದು.
27. ಬೋಧಕರು login ಆದ ಕೂಡಲೇ Voice mute ಮಾಡಿಕೊಳ್ಳತಕ್ಕದ್ದು. ಆದ್ಯತಾ ಪಟ್ಟಿ ಪ್ರಕಾರ ಹೆಸರು ಘೋಷಣೆ ನಂತರ Unmute ಮಾಡಿಕೊಳ್ಳುವುದು.

***(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)***

26/12/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

**ಇವರಿಗೆ**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿಯನ್ನು**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ ಬೆಂಗಳೂರು, ಮೈಸೂರು, ಶಿವಮೊಗ್ಗ , ಮಂಗಳೂರು, ಧಾರವಾಡ ಹಾಗೂ ಕಲಬುರಗಿ- ಮಾಹಿತಿಗಾಗಿ.
3. ರಕ್ಷಾ ಕಡತ
4. ಕಛೇರಿ ಪ್ರತಿ.